**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.72/2024**

**ಪಿಡಬ್ಲ್ಯೂ-03(ಸಿಡಬ್ಲ್ಯೂ-08)**

ಸಾಕ್ಷಿದಾರರ ಹೆಸರು : ಅಪ್ಪಾಸಾಹೇಬ ಬಗಲಿ

ತಂದೆಯ ಹೆಸರು : ಸಿದ್ದಪ್ಪ

ವಯಸ್ಸು : **43** ವರ್ಷ

ಉದ್ಯೋಗ : ಉಪವಲಯ ಅರಣ್ಯ ಅಧಿಕಾರಿ, ಬಬಲೇಶ್ವರ

ವಾಸಸ್ಥಳ : ಬಬಲೇಶ್ವರ, ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 24/03/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು 2021 ರಿಂದ ಬಬಲೇಶ್ವರ ವಿಭಾಗದಲ್ಲಿ ಉಪವಲಯ ಅರಣ್ಯ ಅಧಿಕಾರಿ ಆಗಿ ಸೇವೆ ಸಲ್ಲಿಸುತ್ತಿದ್ದೇನೆ. ಚಾಸಾ-1 ಮತ್ತು 7 ರವರ ಪರಿಚಯ ಇದೆ. ಚಾಸಾ-5 & 6 ರವರು ನಮ್ಮ ಇಲಾಖೆಯಲ್ಲಿ ನಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಾರೆ.

2. ದಿ: 24.10.2022 ರಂದು ರಾತ್ರಿ 11.30 ಗಂಟೆಗೆ ಚಾಸಾ-5 ರವರು ನನಗೆ ದೂರವಾಣಿ ಕರೆ ಮಾಡಿ, ಮಮದಾಪೂರದ ಉಪ್ಪಲದಿನ್ನಿ ರಸ್ತೆಗೆ ದೊಡ್ಡ ಕೆರೆಯಿಂದ ಮೊಸಳೆ ಬಂದಿರುವುದಾಗಿ ತಿಳಿಸಿದರು. ನಾನು ಆ ಸಮಯದಲ್ಲಿ ಬಿದರಿಯಲ್ಲಿ ಗಸ್ತಿನಲ್ಲಿ ಇದ್ದೆ. ನಾನು ಚಾಸಾ-9 ರವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋದೆ. ನಾವು ಚಾಸಾ-5 & 6 ರವರ ಸಹಾಯದಿಂದ ಮೊಸಳೆಯನ್ನು ಹಿಡಿದು, ಅದನ್ನು ಖಾಸಗಿ ವಾಹನದಲ್ಲಿ ಹಾಕಿ ಆಲಮಟ್ಟಿ ಹಿನ್ನಿರಿನಲ್ಲಿ ಬಿಟ್ಟು ಬಂದೆವು. ಆ ಸಮಯದಲ್ಲಿ ಸ್ಥಳದಲ್ಲಿ ಸಾರ್ವಜನಿಕರು ಸೇರಿದ್ದರು. ನಾನು ಅಲ್ಲಿ ಯಾವುದೇ ಗಲಾಟೆಯನ್ನು ಗಮನಿಸಿರುವುದಿಲ್ಲ. ನಾವು ಇದ್ದಾಗ ಅಲ್ಲಿ ಯಾವುದೇ ಗಲಾಟೆ ಆಗಿರುವುದಿಲ್ಲ. ನಾವು ಹೋಗುವ ಮುಂಚೆ

ಗಲಾಟೆ ಆಗಿತ್ತೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಚಾಸಾ-5 ರವರು ನನಗೆ ಗಲಾಟೆ ಆದ ಬಗ್ಗೆ ಹೇಳಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಯವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಯ ಪರಿಚಯ ನನಗೆ ಇಲ್ಲ. ಆತನನ್ನು ನಾನು ಆ ದಿನ ಸ್ಥಳದಲ್ಲಿ ನೋಡಿರುವುದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

3. ದಿ: 25.10.2022 ರಂದು ನಸುಕಿನ 1.00 ಗಂಟೆ ಸುಮಾರಿಗೆ ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಚಾಸಾ-5 ರವರು ನನಗೆ ಆರೋಪಿಯು ಚಾಸಾ-1 ರವರು ಮೊಸಳೆ ಅಪಾಯಕಾರಿ ಪ್ರಾಣಿ ಇದೆ ದೂರ ಸರಿರಿ ಎಂದು ಹೇಳಿದಾಗ ಆತ ದೂರ ಹೋಗದೇ ಮೊಸಳೆ ಸಮೀಪ ಕುಡುಗೋಲು ಹಿಡಿದುಕೊಂಡು ನಿಂತಿದ್ದ ಎಂದು ರತಿಳಿಸಿದ ಎಂದರೆ ಸರಿಯಲ್ಲ. ಆದರೂ ಕೂಡ ಆತ ದೂರ ಹೋಗದೇ ಚಾಸಾ-1 ರವರು ಅವನಿಗೆ ದೂರ ಸರಿ ಎಂದು ಗದರಿಸಿದಾಗ ಆತ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕರ್ತವ್ಯದ ಮೇಲೆ ಇದ್ದ ಅವರ ಅಂಗಿಗೆ ಕೈ ಹಾಕಿ ಜಗ್ಗಿ ಹರಿದು, ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕುಡುಗೋಲನ್ನು ಚಾಸಾ-1 ರವರ ಕಡೆ ಜೋರಾಗಿ ಬೀಸಿದ ಎಂದು ತಿಳಿಸಿದನು ಎಂದರೆ ಸರಿಯಲ್ಲ. ಚಾಸಾ-1 ರವರು ಕೆಳಗೆ ಬಗ್ಗಿ ತಪ್ಪಿಸಿಕೊಂಡಿದ್ದು, ಅಷ್ಟರಲ್ಲಿ ಚಾಸಾ-5, 6 ಮತ್ತು ಸಾವಳಗಿ ಪೋಲಿಸರು ಮತ್ತು ರಾಜಾಸಾಬ ದಳವಾಯಿ ಇವರು ಕೂಡಿ ಗಲಾಟೆ ಬಿಡಿಸಿರುವುದಾಗಿ ತಿಳಿಸಿದರು ಎಂದರೆ

ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುವುದಾಗಿ ತಿಳಿಸಿದನು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೇಲೆ ಹೇಳಿದಂತೆ ತನಿಖಾಧಿಕಾರಿಯವರ ಮುಂದೆ ದಿ: 09.04.2023 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಈ ಭಾಗವನ್ನು ನಿ.ಪಿ.3 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ.ಪಿ.ಎಚ್.ಕೆ., ವಕೀಲರಿಂದ ಆರೋಪಿ ಪರಃ**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.72/2024**

**ಪಿಡಬ್ಲ್ಯೂ-04 (ಸಿಡಬ್ಲ್ಯೂ-09)**

ಸಾಕ್ಷಿದಾರರ ಹೆಸರು : ಸಂತೋಷಕುಮಾರ ಅಜುರ

ತಂದೆಯ ಹೆಸರು : ಅಲ್ಲಮಪ್ರಭು

ವಯಸ್ಸು : **41** ವರ್ಷ

ಉದ್ಯೋಗ : ವಲಯ ಅರಣ್ಯ ಅಧಿಕಾರಿ, ವಿಜಯಪುರ ವಲಯ

ವಾಸಸ್ಥಳ : ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 24/03/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ಡಿಸೆಂಬರ್ 2021 ರಿಂದ ನಾನು ವಿಜಯಪುರ ವಲಯ ಅರಣ್ಯ ಅಧಿಕಾರಿ ಸೇವೆ ಸಲ್ಲಿಸುತ್ತಿದ್ದೇನೆ. ಚಾಸಾ-1 ಮತ್ತು 7 ರವರ ಪರಿಚಯ ಇದೆ. ಚಾಸಾ-5 & 6 ರವರು ನಮ್ಮ ಇಲಾಖೆಯಲ್ಲಿ ನಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಾರೆ.

2. ದಿ: 24.10.2022 ರಂದು ರಾತ್ರಿ 11.30 ಗಂಟೆಗೆ ಚಾಸಾ-5 ರವರು ನನಗೆ ದೂರವಾಣಿ ಕರೆ ಮಾಡಿ, ಮಮದಾಪೂರದ ಉಪ್ಪಲದಿನ್ನಿ ರಸ್ತೆಗೆ ದೊಡ್ಡ ಕೆರೆಯಿಂದ ಮೊಸಳೆ ಬಂದಿರುವುದಾಗಿ ತಿಳಿಸಿದರು. ನಾನು ಮತ್ತು ಚಾಸಾ-8 ರವರು ಮಾಹಿತಿ ಬಂದ ಸ್ಥಳಕ್ಕೆ ಹೋದೆ. ನಾವು ಚಾಸಾ-5 & 6 ರವರ ಸಹಾಯದಿಂದ ಮೊಸಳೆಯನ್ನು ಹಿಡಿದು, ಅದನ್ನು ಖಾಸಗಿ ವಾಹನದಲ್ಲಿ ಹಾಕಿ ಆಲಮಟ್ಟಿ ಹಿನ್ನಿರಿನಲ್ಲಿ ಬಿಟ್ಟು ಬಂದೆವು. ಆ ಸಮಯದಲ್ಲಿ ಸ್ಥಳದಲ್ಲಿ ಸಾರ್ವಜನಿಕರು ಸೇರಿದ್ದರು. ನಾನು ಅಲ್ಲಿ ಯಾವುದೇ ಗಲಾಟೆಯನ್ನು ಗಮನಿಸಿರುವುದಿಲ್ಲ. ನಾವು ಇದ್ದಾಗ ಅಲ್ಲಿ ಯಾವುದೇ ಗಲಾಟೆ ಆಗಿರುವುದಿಲ್ಲ. ನಾವು ಹೋಗುವ ಮುಂಚೆ ಗಲಾಟೆ ಆಗಿತ್ತೋ, ಇಲ್ಲವೋ

ಎಂದು ನನಗೆ ಗೊತ್ತಿಲ್ಲ. ಚಾಸಾ-5 ರವರು ನನಗೆ ಗಲಾಟೆ ಆದ ಬಗ್ಗೆ ಹೇಳಿರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಯವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿಯ ಪರಿಚಯ ನನಗೆ ಇಲ್ಲ. ಆತನನ್ನು ನಾನು ಆ ದಿನ ಸ್ಥಳದಲ್ಲಿ ನೋಡಿರುವುದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

3. ದಿ: 25.10.2022 ರಂದು ನಸುಕಿನ 1.00 ಗಂಟೆ ಸುಮಾರಿಗೆ ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಚಾಸಾ-5 ರವರು ನನಗೆ ಆರೋಪಿಯು ಚಾಸಾ-1 ರವರು ಮೊಸಳೆ ಅಪಾಯಕಾರಿ ಪ್ರಾಣಿ ಇದೆ ದೂರ ಸರಿರಿ ಎಂದು ಹೇಳಿದಾಗ ಆತ ದೂರ ಹೋಗದೇ ಮೊಸಳೆ ಸಮೀಪ ಕುಡುಗೋಲು ಹಿಡಿದುಕೊಂಡು ನಿಂತಿದ್ದ ಎಂದು ರತಿಳಿಸಿದ ಎಂದರೆ ಸರಿಯಲ್ಲ. ಆದರೂ ಕೂಡ ಆತ ದೂರ ಹೋಗದೇ ಚಾಸಾ-1 ರವರು ಅವನಿಗೆ ದೂರ ಸರಿ ಎಂದು ಗದರಿಸಿದಾಗ ಆತ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕರ್ತವ್ಯದ ಮೇಲೆ ಇದ್ದ ಅವರ ಅಂಗಿಗೆ ಕೈ ಹಾಕಿ ಜಗ್ಗಿ ಹರಿದು, ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ಕುಡುಗೋಲನ್ನು ಚಾಸಾ-1 ರವರ ಕಡೆ ಜೋರಾಗಿ ಬೀಸಿದ ಎಂದು ತಿಳಿಸಿದನು ಎಂದರೆ ಸರಿಯಲ್ಲ. ಚಾಸಾ-1 ರವರು ಕೆಳಗೆ ಬಗ್ಗಿ ತಪ್ಪಿಸಿಕೊಂಡಿದ್ದು, ಅಷ್ಟರಲ್ಲಿ ಚಾಸಾ-5, 6 ಮತ್ತು ಸಾವಳಗಿ ಪೋಲಿಸರು ಮತ್ತು ರಾಜಾಸಾಬ ದಳವಾಯಿ ಇವರು ಕೂಡಿ ಗಲಾಟೆ ಬಿಡಿಸಿರುವುದಾಗಿ ತಿಳಿಸಿದರು ಎಂದರೆ

ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿರುವುದಾಗಿ ತಿಳಿಸಿದನು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಮೇಲೆ ಹೇಳಿದಂತೆ ತನಿಖಾಧಿಕಾರಿಯವರ ಮುಂದೆ ದಿ: 09.04.2023 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಈ ಭಾಗವನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- ಶ್ರೀ.ಪಿ.ಎಚ್.ಕೆ., ವಕೀಲರಿಂದ ಆರೋಪಿ ಪರಃ**

ಇಲ್ಲ ಎಂದು ನುಡಿಯುತ್ತಾರೆ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.72/2024**

**ಪಿಡಬ್ಲ್ಯೂ- 05 (ಸಿಡಬ್ಲ್ಯೂ-10)**

ಸಾಕ್ಷಿದಾರರ ಹೆಸರು : ಸಾಗರ ಮುಗಳಖೋಡ

ತಂದೆಯ ಹೆಸರು : ಹನಮಂತ

ವಯಸ್ಸು : **36** ವರ್ಷ

ಉದ್ಯೋಗ : ಪಿಸಿ ನಂ.**566** ಸಂಚಾರ ಪಿಎಸ್ ವಿಜಯಪುರ

ವಾಸಸ್ಥಳ : ವಿಜಯಪುರ

**ಸಾಕ್ಷಿಗೆ ಇಂದು ದಿನಾಂಕ :- 24/03/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು 2011 ರಿಂದ 2024 ರವರೆಗೆ ಬಬಲೇಶ್ವರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 25.10.2022 ರಂದು ಮಮದಾರಪೂರ ದೊಡ್ಡ ಕೆರೆಯ ಬಳಿ ಘಟನೆ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ಹಾಜರಿದ್ದು, ಫೋಟೋಗಳನ್ನು ತೆಗೆದಿರುತ್ತೇನೆ. ಪಂಚನಾಮೆಯನ್ನು ಮಧ್ಯಾಹ್ನ 3.30 ರಿಂದ 4.30 ರವರೆಗೆ ಮಾಡಿರುತ್ತಾರೆ. ನಾನು ತೆಗೆದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.5 ಮತ್ತು 6 ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಯು ಹಾಜರು ಪಡೆಸಿದ ಕುಡುಗೋಲನ್ನು ಮಮದಾಪೂರ ಕೆರೆಯ ಬಳಿ ಅಮಾನತ ಪಡೆಸಿಕೊಳ್ಳುವ ಸಮಯದಲ್ಲಿ ಸಂಜೆ 6.10 ರಿಂದ 7.10 ರವರೆಗೆ ಪಂಚನಾಮೆ ಮಾಡಿದ್ದು, ಆ ಸಮಯದಲ್ಲಿ ನಾನು ಎರಡು ಫೋಟೋಗಳನ್ನು ತೆಗೆದಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.7 ಮತ್ತು 8 ಎಂದು

ಗುರುತಿಸಲಾಯಿತು.

3. ದಿ: 26.10.2022 ರಂದು ಚಾಸಾ-1 ರವರು ಘಟನೆ ಸಮಯದಲ್ಲಿ ಧರಿಸಿದ್ದ ಅಂಗಿಯನ್ನು ಹಾಜರು ಪಡೆಸಿದ್ದು, ಅದನ್ನು ವೃತ್ತ ಪೋಲಿಸ್ ನಿರೀಕ್ಷಕರ ಕಚೇರಿ, ವಿಜಯಪುರ ಇಲ್ಲಿ ಪಂಚನಾಮೆ ಮಾಡಿ, ಅಮಾನತ ಪಡೆಸಿಕೊಂಡಿದ್ದು, ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ತೆಗೆದ ಬಗ್ಗೆ ಕಲಂ.65(ಬಿ) ಸಾಕ್ಷ್ಯಾಧಿನಿಯಮದಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಶ್ರೀ.ಪಿ.ಎಚ್.ಕೆ., ವಕೀಲರಿಂದ ಆರೋಪಿ ಪರಃ**

4. ನಮ್ಮ ಠಾಣೆಯಲ್ಲಿ ಪರಿಣಿತ ಮತ್ತು ಇಲಾಖೆಯಿಂದ ನೇಮಕಗೊಂಡ ಫೋಟೋ ಗ್ರಾಫರ ಇರುವುದಿಲ್ಲ. ನಿ.ಪಿ.5 ರಿಂದ 10 ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆಗೆ ಹೋಗಿರುವುದಿಲ್ಲ ಮತ್ತು ನಿ.ಪಿ.5 ರಿಂದ 9 ನ್ನು ನಾನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮೇಲಾಧಿಕಾರಿಗಳಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.